‘ಇಲ್ಲ, ಅಪ್ಪ ಮನೆಯಲ್ಲಿ ಎಲ್ಲಿರುತ್ತಾರೆ?’ ನನ್ನ ಮನಸ್ಸಿನಲ್ಲಿದ್ದದ್ದು ಹೊರಗೆ ಬಂತು. ಅವರು ಮನೆಯಿಂದ ಬಹುತೇಕ ಹೊರಗಿರುವುದು ನನ್ನ ಮನಸ್ಸಿಗೂ ದುಃಖವಾಗುತ್ತಿತ್ತು. ಅವರಿಗೆ ನನ್ನ ಹುಟ್ಟುಹಬ್ಬದ ದಿನ ನೆನಪೇ ಇರುತ್ತಿರಲಿಲ್ಲ, ಅಂದು ಅವರು ಮನೆಗೆ ತುಂಬಾ ತಡವಾಗಿ ಬರುವುದು ಸಹ ನನಗೆ ಕೆಡುಕೆನಿಸಿತ್ತು. ಹಾಗಂತ ಅಪ್ಪನ ಪ್ರೀತಿ ನನಗೆಂದೂ ಲಭಿಸಿರಲಿಲ್ಲ.

‘ಹಾಗಾದರೆ ಹೋಗಲು ಸಿದ್ಧಳಾಗು! ನಿನ್ನ ಬಟ್ಟೆಗಳು, ಪುಸ್ತಕಗಳನ್ನು ತೆಗೆದುಕೋ. ನಾನೂ ನನ್ನ ವಸ್ತುಗಳನ್ನು ತೆಗೆದುಕೊಳ್ಳುತ್ತೇನೆ’. ನಂತರ ಅಮ್ಮ ನಿರ್ಣಾಯಕ ಧ್ವನಿಯಲ್ಲಿ ಹೇಳಿದರು, ‘ಇನ್ನು ನಾವು ಇಲ್ಲಿರುವುದಿಲ್ಲ!’

‘ನಾವೆಲ್ಲಿಗೆ ಹೋಗೋದು?’ ಅಮ್ಮನನ್ನು ಕೇಳಲು ಬಯಸಿದೆ, ಆದರೆ ಕೇಳಲಿಲ್ಲ; ಏಕೆಂದರೆ ನನಗೆ ನನ್ನ ಅಮ್ಮನ ಬಗ್ಗೆ ನಂಬಿಕೆಯಿತ್ತು. ಪ್ರತಿಯೊಂದು ಮಗುವಿಗೆ ತನ್ನ ತಂದೆಗಿಂತ ತಾಯಿಯ ಬಗ್ಗೆ ಹೆಚ್ಚು ನಂಬಿಕೆಯಿರುತ್ತದೆ. ಅಮ್ಮ ಸೋದರತ್ತೆಯ ಮನೆಗೆ ಹೋಗುತ್ತಾರೆ ಎಂದು ಅನ್ನಿಸಿತು.

ಒಮ್ಮೆ ಹೀಗಾಗಿತ್ತು. ಅಮ್ಮ ಮತ್ತು ಅಪ್ಪನ ನಡುವೆ ಸಿಕ್ಕಾಪಟ್ಟೆ ಜಗಳವಾಗಿತ್ತು, ಅಮ್ಮ ಸಿಟ್ಟಿನ ಭರದಲ್ಲಿ ನನ್ನನ್ನು ಕರೆದುಕೊಂಡು ಬಸ್‌ಸ್ಟ್ಯಾಂಡಿಗೆ ಹೋಗಿದ್ದರು. ಆ ದಿನಗಳಲ್ಲಿ ನಾವು ಮಂಡಲಾದ ಸಮೀಪದಲ್ಲಿದ್ದ ವಿಕ್ರಮಪುರ ಎಂಬ ಹಳ್ಳಿಯಲ್ಲಿರುತ್ತಿದ್ದೆವು. ಆ ದಿನಗಳಲ್ಲಿ ವಿಕ್ರಮಪುರ ಚಿಕ್ಕ ಪ್ರದೇಶವಾಗಿತ್ತು. ಸೋದರತ್ತೆಯವರ ವಿವಾಹ ಅಲ್ಲಿಯೇ ಆಗಿತ್ತು. ಅವರ ಮಾವನ ಮನೆಯವರು ಅರಣ್ಯಉತ್ಪನ್ನಗಳ ಗುತ್ತಿಗೆಯನ್ನು ಹಿಡಿದಿದ್ದರು. ಸೋದರತ್ತೆಯವರ ಮನೆಗೆ ಹೋಗಿ ನಾನು ಅವರ ಮಕ್ಕಳೊಂದಿಗೆ ಆಟವಾಡುವುದರಲ್ಲಿ ತೊಡಗಿದ್ದೆ. ಆಗ ನಾನು ತುಂಬಾ ಚಿಕ್ಕವಳಾಗಿದ್ದೆ. ಸೋದರತ್ತೆಯವರು ಏನು ಸಂದೇಶ ಕಳುಹಿಸಿ ಅಪ್ಪನನ್ನು ಕರೆಯಿಸಿಕೊಂಡಿದ್ದರೋ ನನಗೆ ತಿಳಿಯದು. ಅವರು ಅಪ್ಪ ಮತ್ತು ಅಮ್ಮನ ನಡುವೆ ಎಂಥ ಒಪ್ಪಂದವನ್ನು ಮಾಡಿಸಿದರೋ, ಅದು ಸಹ ನನಗೆ ತಿಳಿಯದು. ಆದರೆ ನಾನು, ಅಮ್ಮ ಮತ್ತು ಅಪ್ಪನೊಂದಿಗೆ ನಮ್ಮ ಮನೆಗೆ ಮರಳಿ ಬಂದಿದ್ದು ಮಾತ್ರ ನೆನಪಿದೆ. ನಮ್ಮನ್ನು ಬೀಳ್ಕೊಡುವಾಗ ಸೋದರತ್ತೆಯವರು ನನಗೊಂದು ಮುದ್ದು ಗೊಂಬೆ ಮತ್ತು ಸಾಕಷ್ಟು ಸಿಹಿತಿನಿಸುಗಳನ್ನು ಕೊಟ್ಟಿದ್ದರು. ನಾನು ಸೋದರತ್ತೆಯವರನ್ನು ತುಂಬಾ ದಿನ ನೆನಪಿಸಿಕೊಂಡಿದ್ದೆ.

ನಾನು ನನ್ನ ಕೋಣೆಗೆ ಹೋಗಿ ನನ್ನ ಬಟ್ಟೆಗಳು ಮತ್ತು ನನ್ನ ಕಾಪಿಪುಸ್ತಕಗಳನ್ನು ಒಟ್ಟು ಮಾಡಿಕೊಂಡೆ. ಆಗಲೇ ಅಮ್ಮ ಒಂದು ಖಾಲಿ ಸೂಟ್‌ಕೇಸ್ ತಂದರು. ಅವರು ಆ ಸೂಟ್‌ಕೇಸಿನಲ್ಲಿ ನನ್ನೆಲ್ಲಾ ವಸ್ತುಗಳನ್ನು ತುರುಕಿತುರುಕಿ ತುಂಬಿದರು.

‘ನಡಿ ಹೋಗೋಣ’, ನನ್ನ ಸೂಟ್‌ಕೇಸ್ ಹಿಡಿದು ಅಮ್ಮ ಹೇಳಿದರು. ನಾನು ಅಮ್ಮನ ಹಿಂದಿಂದೆ ನನ್ನ ಕೋಣೆಯಿಂದ ಹೊರ ಬಂದೆ. ವರಾಂಡದಲ್ಲಿ ಇನ್ನೊಂದು ಸೂಟ್‌ಕೇಸ್ ಇತ್ತು. ಅದರಲ್ಲಿ ಅಮ್ಮನ ವಸ್ತುಗಳಿದ್ದವು. ಅಮ್ಮ ಬಾಗಿಲನ್ನು ತೆರೆದು, ಎರಡೂ ಸೂಟ್‌ಕೇಸ್‌ಗಳನ್ನು ಎತ್ತಿಕೊಂಡು ಹೋಗಿ ಬಾಗಿಲ ಹೊರಗಿಟ್ಟರು. ನಂತರ ನನಗೆ ಹೊರ ಬರಲು ಸಂಜ್ಞೆ ಮಾಡಿದರು. ನಾನು ಹೊರ ಬರುತ್ತಲೇ ಅಮ್ಮ ಬಾಗಿಲನ್ನು ಮುಚ್ಚಿ ಹೊರಗಿನಿಂದ ಬೀಗ ಹಾಕಿದರು.

‘ನೀನಿಲ್ಲೇ ಇರು, ನಾನು ಲಕ್ಷ್ಮೀಗೆ ಬೀಗದ ಕೀಯನ್ನು ಕೊಟ್ಟು ಬರ್ತೀನಿ’, ಅಮ್ಮ ಪಕ್ಕದ ಮನೆಯ ಲಕ್ಷ್ಮೀ ಆಂಟಿಯವರ ಮನೆಗೆ ಹೋದರು. ಮರಳಿ ಬಂದ ಅಮ್ಮ ಸೂಟ್‌ಕೇಸ್‌ಗಳನ್ನು ಹಿಡಿದುಕೊಂಡರು. ನಾವಿಬ್ಬರು ಮುಖ್ಯ ರಸ್ತೆಗೆ ಬಂದೆವು. ಅಮ್ಮ ಹತ್ತು ಹೆಜ್ಜೆ ನಡೆದ ಕೂಡಲೇ ಏದುಸಿರು ಬಿಡಲಾರಂಭಿಸಿದರು. ಅವರು ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲ ಎಂಬುದು ನೆನಪಾಯಿತು. ಬೆಳಿಗ್ಗೆ ಸಹ ಅಪ್ಪನೊಂದಿಗೆ ಅವರ ಜಗಳವಾಗಿತ್ತು, ಇದರಿಂದ ಅವರ ಮನಸ್ಸಿಗೆ ದುಃಖವಾಗಿತ್ತು. ಸ್ವಲ್ಪ ಹೊತ್ತಿಗೆ ನಮಗೊಂದು ಪೆಡಲ್‌ರಿಕ್ಷಾ ಸಿಕ್ಕಿತು. ನಾನು ಮತ್ತೊಮ್ಮೆ ಅಮ್ಮನೊಂದಿಗೆ ಬಸ್‌ಸ್ಟ್ಯಾಂಡಿಗೆ ಹೋದೆ. ಈಗ ನನಗೆ ಹನ್ನೆರಡು ವರ್ಷ, ನಾಲ್ಕು ತಿಂಗಳಾಗಿತ್ತು. ನಮ್ಮೊಂದಿಗೆ ಎರಡು ಸೂಟ್‌ಕೇಸ್‌ಗಳಲ್ಲಿ ನಮ್ಮ ಲಗ್ಗೇಜ್‌ಗಳಿದ್ದವು. ಈ ಹಿಂದೆ ನಾನು ಚಿಕ್ಕವಳಾಗಿದ್ದು, ಬಹುಶಃ ನನಗೆ ನಾಲ್ಕೈದು ವರ್ಷಗಳಿರಬೇಕು, ಆಗ ನಮ್ಮೊಂದಿಗೆ ಬಹುಶಃ ಯಾವ ಸಾಮಾನುಗಳೂ ಇರಲಿಲ್ಲ, ಅಮ್ಮನ ಬಳಿ ಒಂದು ಹ್ಯಾಂಡ್‌ಬ್ಯಾಗ್ ಮಾತ್ರವಿತ್ತು. ಅಮ್ಮ ನನ್ನನ್ನು ಸೂಟ್‌ಕೇಸ್‌ಗಳ ಬಳಿ ನಿಲ್ಲಿಸಿದಳು. ತಾವು ಬಸ್ ಬಗ್ಗೆ ತಿಳಿಯಲು ಕೌಂಟರ್ ಬಳಿಗೆ ಹೋದರು. ಸುಮಾರು ಹತ್ತು ನಿಮಿಷಗಳ ನಂತರ ಅವರು ಎರಡು ಟಿಕೆಟ್‌ಗಳನ್ನು ಕೈಯಲ್ಲಿ ಹಿಡಿದು ಬಂದರು.

‘ನಡಿ ಸುಗಂಧಾ,’ ಅಮ್ಮ ಹೇಳಿದರು. ಅವರು ಸದಾ ನನ್ನ ಪೂರ್ಣ ಹೆಸರನ್ನೇ ಹೇಳುತ್ತಿದ್ದರು. ನನಗೆ ಮನೆಯ ಸಂಕ್ಷಿಪ್ತ ಹೆಸರು ಇರಲಿಲ್ಲ. ಅಮ್ಮ ಮತ್ತೆ ಎರಡೂ ಸೂಟ್‌ಕೇಸ್‌ಗಳನ್ನು ಎತ್ತಿಕೊಳ್ಳಲು ಅನುವಾದಾಗ ನಾನು ಒಂದು ಸೂಟ್‌ಕೇಸನ್ನು ಹಾರಿ ಬಂದು ತೆಗೆದುಕೊಂಡೆ. ಸೂಟ್‌ಕೇಸ್ ಭಾರವಾಗಿತ್ತು. ಅದನ್ನು ಬಸ್ ಇರುವಲ್ಲಿಗೆ ತೆಗೆದುಕೊಂಡು ಹೋಗುವಾಗ ನಾನು ಏದುಸಿರು ಬಿಟ್ಟೆ. ಬಸ್ ಬಳಿಗೆ ಹೋಗುತ್ತಲೇ ಕ್ಲೀನರ್ ಎರಡೂ ಸೂಟ್‌ಕೇಸ್‌ಗಳನ್ನು ನಮ್ಮಿಂದ ತೆಗೆದುಕೊಂಡು ಬಸ್ ಮೇಲೆ ಹತ್ತಿದ್ದ ವ್ಯಕ್ತಿಗೆ ಒಂದೊಂದಾಗಿ ಕೊಟ್ಟ.

‘ಸರಿಯಾಗಿಡಪ್ಪ, ಅಮ್ಮ ಬಸ್ ಮೇಲಿದ್ದ ವ್ಯಕ್ತಿಗೆ ಹೇಳಿದರು.

‘ನೀವೇನೂ ಚಿಂತಿಸಬೇಡಿ’ ಎಂದ ಆ ವ್ಯಕ್ತಿ. ನಂತರ ನಾನು ಮತ್ತು ಅಮ್ಮ ಇಬ್ಬರು ಬಸ್‌ನೊಳಗೆ ಹೋಗಿ ಕೂತೆವು. ಅದುವರೆಗೆ ನನಗೆ, ನಾವು ಮತ್ತೊಮ್ಮೆ ವಿಕ್ರಮಪುರದಲ್ಲಿರುವ ಸೋದರತ್ತೆಯ ಮನೆಗೆ ಹೋಗುತ್ತಿದ್ದೇವೆ ಎಂದು ಅನ್ನಿಸುತ್ತಿತ್ತು. ಮಾರ್ಗ ದೀರ್ಘವಾಗಿತ್ತು. ಮಾರ್ಗದಲ್ಲಿ ಯಾವಯಾವ ಊರುಗಳಿದ್ದವು ಎಂಬುದು ನನಗೆ ಗೊತ್ತಿರಲಿಲ್ಲ. ಆದರೆ ಕೆಲವು ಗಂಟೆಗಳ ನಂತರ, ನಾವು ವಿಕ್ರಮಪುರಕ್ಕೆ ಹೋಗುತ್ತಿಲ್ಲ ಎಂದು ತಿಳಿಯಿತು. ಏಕೆಂದರೆ ಅಷ್ಟು ಹೊತ್ತಿಗೆ ನಾವು ವಿಕ್ರಮಪುರದಲ್ಲಿರುತ್ತಿದ್ದೆವು.

ಮಾರ್ಗದ ಮಧ್ಯೆ ಬಸ್ ನಿಂತಾಗ ಅಮ್ಮ ಇಳಿದು ಹೋಗಿ ಸಮೋಸಾ ಕೊಂಡು ತಂದಳು. ನಾವಿಬ್ಬರು ಸಮೋಸಾ ತಿಂದು ನಮ್ಮ ಹಸಿವೆಯನ್ನು ನೀಗಿಸಿಕೊಂಡೆವು. ನನಗೂ ತುಂಬಾ ಹಸಿವೆಯಾಗಿತ್ತು, ಆದರೆ ನಾನು ಅಮ್ಮನಿಗೆ ನನ್ನ ಹಸಿವೆಯ ಬಗ್ಗೆ ಹೇಳಲು ಬಯಸುತ್ತಿರಲಿಲ್ಲ. ಅಮ್ಮ ಇನ್ನೊಮ್ಮೆ ಇಳಿದು ಹೋಗಿ ಹೋಟೆಲ್‌ನ ಗಾಜಿನ ಲೋಟದಲ್ಲಿ ನೀರು ತಂದಳು. ನಾನು ನೀರು ಕುಡಿದೆ.

‘ಚಹಾ ಕುಡೀತೀಯಾ?’ ಅಮ್ಮ ಕೇಳಿದರು.

‘ಬೇಡ’ ಎಂದೆ. ನಾನು ಚಹಾ ಕುಡಿಯಲು ಬಯಸುತ್ತಿರಲಿಲ್ಲ. ಸಮೋಸಾದ ಮೆಣಸಿನಕಾಯಿಯಿಂದಾಗಿ ನನ್ನ ಬಾಯಿ ಉರಿಯುತ್ತಿತ್ತು. ನಾನು ಮೆಣಸಿನಕಾಯಿ ತಿನ್ನುತ್ತಿರಲಿಲ್ಲ, ಅಮ್ಮ ಸಹ ತಿನ್ನುತ್ತಿರಲಿಲ್ಲ, ಆದರೆ ಆಗ ನಮ್ಮ ಬಳಿ ಬೇರೆ ಮಾರ್ಗವಿರಲಿಲ್ಲ. ಸಮೋಸಾ ಸಿಕ್ಕಿದ್ದೇ ದೊಡ್ಡ ವಿಷಯವಾಗಿತ್ತು. ನಾನು ಅಮ್ಮನ ಮಡಿಲಿನಲ್ಲಿ ತಲೆಯಿಟ್ಟು ಮುದುಡಿ ಮಲಗಿದೆ. ಎರಡು ಸೀಟುಗಳಲ್ಲಿ ಸರಿಯಾಗಿ ಮಲಗಲು ಸಾಧ್ಯವಾಗುತ್ತಿರಲಿಲ್ಲ. ನನಗೆ ಹೆಚ್ಚು ಜಾಗ ಸಿಗಲೆಂದು ಅಮ್ಮ ಸೀಟಿನ ತುದಿಗೆ ಒತ್ತಿ ಕೂತಳು. ನಾನು ಮೊದಲು ತೂಕಡಿಸಿ, ನಂತರ ನಿದ್ರೆ ಮಾಡಿದೆ.

‘ಸುಗಂಧಾ ಏಳು! ನಾವು ಇಳಿಯಬೇಕಿದೆ’, ಅಮ್ಮ ನನ್ನನ್ನು ಅಲುಗಾಡಿಸಿ ಎಚ್ಚರಿಸಿದರು. ನಾವು ಸಂಜೆಯ ಮಬ್ಬಿನಲ್ಲಿ ಮಂಡಲಾದಿಂದ ಹೊರಟಿದ್ದೆವು, ಆದರೆ ಬಸ್ಸಿನಿಂದ ಇಳಿಯುವಾಗ ಬಿಸಿಲು ಏರಿತ್ತು. ನಾವು ದೀರ್ಘ ಪ್ರಯಾಣ ಮಾಡಿದ್ದೆವು.

‘ಇದು ಯಾವ ಊರು?’ ಅಮ್ಮನನ್ನು ಕೇಳಿದೆ.

‘ಭೋಪಾಲ್’ ಎಂದರು ಅಮ್ಮ.

ನನಗೆ ಆಶ್ಚರ್ಯವಾಯಿತು. ಅದುವರೆಗೆ ನಾನು ಭೋಪಾಲನ್ನು ಮಧ್ಯಪ್ರದೇಶದ ರಾಜಧಾನಿಯ ರೂಪದಲ್ಲಿಯೇ ಓದಿದ್ದೆ ಕೇಳಿದ್ದೆ, ಆದರೆ ನೋಡಿರಲಿಲ್ಲ. ಮೊದಲ ಬಾರಿಗೆ ನಾನು ಭೋಪಾಲ್‌ಗೆ ಬಂದಿದ್ದು ನನಗೆ ಆಶ್ಚರ್ಯದ ವಿಷಯವಾಗಿತ್ತು. ಊರಿನ ಹೆಸರು ಕೇಳಿದ ನಂತರ, ನಾವು ಸೋದರತ್ತೆಯ ಮನೆಗೆ ಬಂದಿಲ್ಲ ಎಂಬುದು ಸ್ಪಷ್ಟವಾಗಿತ್ತು. ಇನ್ನು ಭೋಪಾಲ್‌ನಲ್ಲಿ ನಮಗ್ಯಾರು ಸಂಬಂಧಿಕರಿದ್ದಾರೆ? ನನಗೆ ತಿಳಿದಿರಲಿಲ್ಲ. ನನಗೆ ನನ್ನೆಲ್ಲಾ ಸಂಬಂಧಿಕರ ಬಗ್ಗೆ ಸಹ ತಿಳಿದಿರಲಿಲ್ಲ. ಮದುವೆ ಮುಂಜಿ ಸಮಾರಂಭಗಳಲ್ಲಿ ಬಹುತೇಕ ಸಂಬಂಧಿಕರು ಕಲೆಯುತ್ತಿದ್ದರು; ಆಗ ಮಕ್ಕಳಾದ ನಾವು ಪರಸ್ಪರ ಆಟದಲ್ಲಿಯೇ ಮುಳುಗಿರುತ್ತಿದ್ದೆವು. ಇವರು... ದೊಡ್ಡಪ್ಪ, ಇವರು... ಸೋದರತ್ತೆ ಎಂಬುದಷ್ಟೇ ತಿಳಿಯುತ್ತಿತ್ತು. ನಮ್ಮ ಮನೆಗೆ ಸಂಬಂಧಿಕರು ಬರುವುದು ಕಡಿಮೆಯೇ; ಬಹುಶಃ ಅಪ್ಪನ ಒರಟು ಸ್ವಭಾವದಿಂದಾಗಿ. ಅಥವಾ ಬೇರೆ ಕಾರಣಗಳೂ ಇರಬಹುದು. ನನಗೆ ಸರಿಯಾಗಿ ಗೊತ್ತಿಲ್ಲ. ಈ ಬಗ್ಗೆ ನಾನೆಂದೂ ತಲೆ ಕೆಡಿಸಿಕೊಳ್ಳಲಿಲ್ಲ.

ನಾನು ಮೊದಲ ಬಾರಿಗೆ ಟೆಂಪೋದಲ್ಲಿ